July 31, 2025

BSE Limited
Corporate Relationship Dept.,
14th floor, P. J. Tower,
Dalal Street, Fort
Mumbai - 400 001

Scrip Code – 543664

National Stock Exchange of India Limited
Exchange Plaza, Plot no. C/1, G Block,
Bandra-Kurla Complex,
Bandra (E),
Mumbai - 400 051

Scrip Symbol – KAYNES

Dear Sir/Madam,

Subject: Advertisement in Newspapers – Financial Results.

In continuation to our letter dated July 30, 2025 regarding outcome of the Board Meeting approving the Financial Results for the Quarter ended June 30, 2025. We are herewith enclosing the copy of newspapers publication of the financials in Financial Express (All India Edition) and Vijaya Karnataka (Karnataka Edition) published on July 31, 2025.

Kindly take the above information on record and acknowledge it.

Thanking You,

Yours faithfully,
For **Kaynes Technology India Limited.**

ANUJ MEHTHA

Digitally signed by ANUJ MEHTHA
DN: c=IN, o=PERSONAL, pseudonym=773a3a81b2ba4aa4ab2233224d8a3522, 2.5.4.20=496f55509c41127be089b59e3cf2da5f71de1d08c6e3f33bebe151285ecb0121, postalCode=571438, st=Karnataka, serialNumber=e289f319bac249267b32cee3b90fdfbc35c64da1077acd55de07f4ebcf63a683, cn=ANUJ MEHTHA
Date: 2025.07.31 16:32:55 +05'30'

Anuj Mehtha
Company Secretary and Compliance Officer
ICSI Membership No.: A62542

ಪಾದಯಾತ್ರೆಯೋ, ಪ್ರತಿಭಟನೆಯೋ? ಸುರ್ಜೇವಾಲಾ-ಸಿಎಂ ಸೇರಿ ನಿಗದಿ

ರಾಹುಲ್ ಪ್ರತಿಭಟನೆ ದಿನ ಬದಲು

■ **ವಿಕ ಸುದ್ದಿಲೋಕ** ಬೆಂಗಳೂರು

ಚುನಾವಣಾ ಆಯೋಗದ ವಿರುದ್ಧ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಬೆಂಗಳೂರಿನಲ್ಲಿ ನಡೆಸುತ್ತಿರುವ ಪ್ರತಿಭಟನೆ ಒಂದು ದಿನ ಮುಂದೂಡಿಕೆಯಾಗಿದ್ದು, ಆ.4 ಬದಲಿಗೆ ಆ.5 ಮಂಗಳವಾರಕ್ಕೆ ಮರು ನಿಗದಿಯಾಗಿದೆ.

ನಗರದ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನಾ

ಮತ ಅಕ್ರಮ ಆರೋಪ

ಸಭೆ ಉದ್ದೇಶಿಸಿ ಭಾಷಣ ಮಾಡಿದ ಬಳಿಕ ರಾಹುಲ್ ಗಾಂಧಿ ಪ್ರಮುಖ ನಾಯಕರ ನಿಯೋಗದೊಂದಿಗೆ ಸಮೀಪದಲ್ಲೇ ಇರುವ ಮುಖ್ಯ ಚುನಾವಣಾ ಅಧಿಕಾರಿ (ಸಿಇಒ) ಕಚೇರಿವರೆಗೆ ಪಾದಯಾತ್ರೆಯಲ್ಲಿ ತೆರಳಿ ಮನವಿ ಸಲ್ಲಿಸುವ ನಿರೀಕ್ಷೆಯಿದೆ.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಗುರುವಾರ ನಗರಕ್ಕೆ ಆಗಮಿಸುತ್ತಿದ್ದು, ಪ್ರತಿಭಟನೆಯ ರೂಪುರೇಷೆಯನ್ನು ಅಂತಿಮಗೊಳಿಸಲಿದ್ದಾರೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರಿನ ಒಂದು ಕ್ಷೇತ್ರ ಸೇರಿ ವ್ಯಾಪಕ ಅಕ್ರಮ ನಡೆದಿದೆ ಎಂದು ಆರೋಪಿಸಿದ್ದ ರಾಹುಲ್ ಗಾಂಧಿ, ತಮ್ಮ ಈ ಆಪಾದನೆಗೆ ಪೂರಕ ದಾಖಲೆಗಳನ್ನು ಪ್ರತಿಭಟನಾ ಸಭೆಯಲ್ಲಿ ಬಿಡುಗಡೆ ಮಾಡಲು ಉದ್ದೇಶಿಸಿದ್ದಾರೆ.

ಪ್ರತಿಭಟನೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರು, ಸಂಸದರು, ಶಾಸಕರು, ಮುಖಂಡರು ಪಾಲ್ಗೊಳ್ಳಲಿದ್ದಾರೆ.

ಆ.5 ರಂದು ರಾಹುಲ್ ಗಾಂಧಿ ನೇತೃತ್ವದಲ್ಲಿ ಚುನಾವಣಾ ಆಯೋಗದ ವಿರುದ್ಧ ಪ್ರತಿಭಟನೆಗೆ ಸಂಬಂಧಿಸಿದಂತೆ ಕೆಲವು ತಾಂತ್ರಿಕ ತೊಡಕುಗಳಿದ್ದು, ರ್‍ಯಾಲಿಯೋ, ಪ್ರತಿಭಟನೆಯೋ ಎಂಬುದು ಇನ್ನೂ ತೀರ್ಮಾನವಾಗಿಲ್ಲ. ಸ್ಥಳದ ಬಗ್ಗೆಯೂ ಗುರುವಾರ ಸುರ್ಜೇವಾಲಾ ಮತ್ತು ಸಿಎಂ ಜತೆ ಚರ್ಚಿಸಿ ಅಂತಿಮ ನಿರ್ಧಾರಕ್ಕೆ ಬರಲಾಗುವುದು.

-ಡಿ.ಕೆ.ಶಿವಕುಮಾರ್ ಡಿಸಿಎಂ

- ಚುನಾವಣಾ ಆಯೋಗದ ವಿರುದ್ಧ ಪ್ರತಿಭಟನೆ
- ರಾಷ್ಟ್ರೀಯ ಮಟ್ಟದಲ್ಲಿ ಪ್ರಭಾವ ಬೀರುವ ಸಭೆ
- ಕನಿಷ್ಠ ಒಂದು ಲಕ್ಷ ಜನರ ಸೇರಿಸಲು ನಿರ್ಧಾರ

ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ: ಗೃಹ ಸಚಿವ

ಇದಕ್ಕೆ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್, ''ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನಾ ಸಭೆ ಉದ್ದೇಶಿಸಿ ರಾಹುಲ್ ಭಾಷಣ ಮಾಡಲಿದ್ದು, ಬಳಿಕ ಕಾಲ್ನಡಿಗೆಯಲ್ಲಿ ಚುನಾವಣಾ ಆಯೋಗಕ್ಕೆ ತೆರಳಿ ಮನವಿ ಸಲ್ಲಿಸಲಿದ್ದಾರೆ. ಪ್ರತಿಭಟನೆಗಳ ಬಗ್ಗೆ ಕೋರ್ಟ್ ನಿರ್ದೇಶನಗಳನ್ನು ಗಮನದಲ್ಲಿಟ್ಟುಕೊಂಡು ಅಗತ್ಯ ಭದ್ರತೆ ಒದಗಿಸಲಾಗುವುದು,'' ಎಂದು ತಿಳಿಸಿದರು.

ಆ.5ರ ಪ್ರತಿಭಟನಾ ಸಭೆ ಹಿನ್ನೆಲೆಯಲ್ಲಿ ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಬುಧವಾರ ಪೂರ್ವಸಿದ್ಧತಾ ಸಭೆ ನಡೆಸಿದರು. ಕನಿಷ್ಠ 1 ಲಕ್ಷ ಜನರನ್ನು ಪ್ರತಿಭಟನೆಗೆ ಕರೆತರಲು ಸಿದ್ಧತೆಯಾಗಿದೆ.

ಪಾದಯಾತ್ರೆ ಅಥವಾ ಪ್ರತಿಭಟನಾ ಸಭೆ: ಬೆಂಗಳೂರು ಸೆಂಟ್ರಲ್ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಮಹದೇವಪುರದಲ್ಲಿ ಚುನಾವಣಾ ಅಕ್ರಮ ನಡೆದಿದೆ ಎಂದು ಆರೋಪಿಸಲಾಗಿದೆ. ಹಾಗಾಗಿ ಮಹದೇವಪುರ ಕ್ಷೇತ್ರದಿಂದ ಶೇಷಾದ್ರಿ ರಸ್ತೆಯಲ್ಲಿರುವ ಆಯೋಗದ ಸಿಇಒ ಕಚೇರಿವರೆಗೆ ಪಾದಯಾತ್ರೆಗೆ ಉದ್ದೇಶಿಸಲಾಗಿತ್ತು. ಇದರಿಂದ ಸಂಚಾರ ಸಮಸ್ಯೆ ಉದ್ಭವಿಸಿ ಸಾರ್ವಜನಿಕ ತೊಂದರೆಯಾಗಲಿದೆ. ಜತೆಗೆ ಪ್ರತಿಭಟನಾ ರ್‍ಯಾಲಿಗಳಿಗೆ ಸಂಬಂಧಿಸಿದಂತೆ ಹೈಕೋರ್ಟ್ ನಿರ್ದೇಶನಗಳನ್ನು ಪಾಲನೆ ಮಾಡಬೇಕಿರುವ ಹಿನ್ನೆಲೆಯಲ್ಲಿ ಈ ಚಿಂತನೆ ಕೈಬಿಡಲಾಗಿದೆ.

ಸಿದ್ಧತಾ ಸಭೆಯಲ್ಲಿ ಮಾತನಾಡಿದ ಡಿ.ಕೆ. ಶಿವಕುಮಾರ್, ''ಪ್ರತಿಭಟನಾ ಸಭೆಯಲ್ಲಿ ಪಕ್ಷದ ಎಲ್ಲ ಶಾಸಕರು, ಸಚಿವರು ಪಾಲ್ಗೊಳ್ಳಬೇಕು ಎಂದು ಸೂಚನೆ ನೀಡಲಾಗಿದೆ,'' ಎಂದು ತಿಳಿಸಿದರು.

ಸ್ಥಳದ ಆಯ್ಕೆ: ''ಎಐಸಿಸಿ ನಾಯಕರು ಪಾಲ್ಗೊಳ್ಳುತ್ತಿರುವ ಈ ಪ್ರತಿಭಟನಾ ಸಭೆ ರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯಲಿರುವ ಹಿನ್ನೆಲೆಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನರನ್ನು ಸೇರಿಸಿ ದೊಡ್ಡ ಮಟ್ಟದಲ್ಲಿ ನಡೆಸಬೇಕಿದೆ. ನ್ಯಾಷನಲ್ ಕಾಲೇಜ್ ಅಥವಾ ಫ್ರೀಡಂ ಪಾರ್ಕ್‌ನಲ್ಲಿ 25 ಸಾವಿರ ಜನರನ್ನು ಮಾತ್ರ ಸೇರಿಸಲು ಸಾಧ್ಯ. ಹಾಗಾಗಿ ಪ್ರತಿಭಟನಾ ಸ್ಥಳದ ಬಗ್ಗೆ ಇನ್ನೂ ಸ್ಪಷ್ಟ ತೀರ್ಮಾನ ಮಾಡಿಲ್ಲ,'' ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ಚುನಾವಣಾ ಅಕ್ರಮ ಸುಪ್ರೀಂನಲ್ಲಿ ಪ್ರಶ್ನಿಸಲಿ

ಅಕ್ರಮ ನಡೆದಿದ್ದರೆ ನಾವು ಪ್ರತಿಪಕ್ಷ ಆಗುತ್ತಿರಲಿಲ್ಲ: ಬಿವೈವಿ ತಿರುಗೇಟು

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರಿನ ಬೀದಿಯಲ್ಲಿ ಯಾವ ಕಾನೂನಿನಡಿ ರಾಹುಲ್ ಗಾಂಧಿ ಪಾದಯಾತ್ರೆಗೆ ಅನುಮತಿ ನೀಡಲಾಗುತ್ತಿದೆ ಎಂದು ಬಿಜೆಪಿ ಸರಕಾರವನ್ನು ಪ್ರಶ್ನಿಸಿದೆ.



''ಪ್ರತಿಪಕ್ಷವಾಗಿ ಸಿಎಂ ನಿವಾಸದ ಎದುರು ಪ್ರತಿಭಟನೆಗೆ ಮುಂದಾದರೆ ಪೊಲೀಸರು ಹೈಕೋರ್ಟ್‌ನ ಆದೇಶ ಪ್ರತಿ ತೋರಿಸುತ್ತಾರೆ. ಸಿದ್ದರಾಮಯ್ಯನವರು ಪಾದಯಾತ್ರೆ ಮಾಡಬಹುದು. ರಾಹುಲ್ ಮೆರವಣಿಗೆ ಮಾಡಬಹುದು. ಉಳಿದವರಿಗೆ ಅವಕಾಶವಿಲ್ಲ, ಹೈಕೋರ್ಟ್ ಆದೇಶ ಮೀರಿ ಅನುಮತಿ ನೀಡಿದರೆ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದೆ.

ಬಿಜೆಪಿ ಕಚೇರಿಯಲ್ಲಿ ಬುಧವಾರ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ,''ಚುನಾವಣಾ ಅಕ್ರಮದ ಬಗ್ಗೆ ಪುರಾವೆಗಳಿದ್ದರೆ ಅದನ್ನು ಸುಪ್ರೀಂಕೋರ್ಟ್‌ಗೆ ಸಲ್ಲಿಸಿ ಪ್ರಶ್ನಿಸಲಿ,'' ಎಂದು ಸವಾಲು ಹಾಕಿದ್ದಾರೆ.

''ಕಾಂಗ್ರೆಸ್ ಮತ್ತು ರಾಹುಲ್ ಗಾಂಧಿಯವರ ನಡವಳಿಕೆ ಗಮನಿಸಿದರೆ ಅಯ್ಯೋ ಪಾಪ ಅನಿಸುತ್ತದೆ. ಬಿಜೆಪಿಯು ಚುನಾವಣಾ ಆಯೋಗವನ್ನು ದುರ್ಬಳಕೆ ಮಾಡಿಕೊಂಡಿದ್ದರೆ ನಾವು ಕರ್ನಾಟಕದಲ್ಲಿ ಪ್ರತಿಪಕ್ಷ ಸ್ಥಾನದಲ್ಲಿ ಕೂರುವ ಅವಶ್ಯಕತೆ ಇರಲಿಲ್ಲ. ಹಾಗೆಯೇ ಮೂರು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲೂ ಬಿಜೆಪಿ- ಜೆಡಿಎಸ್ ಗೆಲ್ಲುತ್ತಿತ್ತು,'' ಎಂದು ತಿರುಗೇಟು ನೀಡಿದರು.

''ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ- ಜೆಡಿಎಸ್ 19 ಸ್ಥಾನ ಗೆದ್ದಿವೆ. ಹಾಗಿದ್ದರೆ ರಾಯಚೂರು, ದಾವಣಗೆರೆಯಲ್ಲಿ ಕಾಂಗ್ರೆಸ್ ಗೆದ್ದದ್ದು ಹೇಗೆ? ಈ ರೀತಿ ಹುಚ್ಚಾಟ, ರಂಪಾಟದ ಮೂಲಕ ಸಾಂವಿಧಾನಿಕ ಸಂಸ್ಥೆಯ ಬಗ್ಗೆಯೂ ಅನುಮಾನ ವ್ಯಕ್ತಪಡಿಸುವುದು ಅಪಾಯಕಾರಿ ಬೆಳವಣಿಗೆ. ಇದು ಅಕ್ಷಮ್ಯ ಅಪರಾಧ,'' ಎಂದು ಕಿಡಿಕಾರಿದರು.

ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್, ''ರಾಜ್ಯದಲ್ಲಿ ಲೋಕಸಭಾ ಚುನಾವಣೆ ನಡೆದಾಗ ಕಾಂಗ್ರೆಸ್ ಸರಕಾರವಿತ್ತು. ಅಕ್ರಮ ಆಗಿದ್ದರೆ ಆಗಲೇ ಆಯೋಗಕ್ಕೆ ದೂರು ನೀಡಬಹುದೆಂಬ ಸಾಮಾನ್ಯ ಜ್ಞಾನ ರಾಹುಲ್‌ಗೆ ಇಲ್ಲ,'' ಎಂದು ಟೀಕಿಸಿದ್ದಾರೆ.

ಕರ್ನಾಟಕ ನೆನಪಾಯಿತೇ?

''ಕೈಲಾಗದವನು ಮೈಪರಚಿಕೊಂಡ ಎಂಬಂತೆ ಬುದ್ಧಿ ಕಡಿಮೆ ಇರುವ ಕಾರಣಕ್ಕೆ ರಾಹುಲ್ ಆಯೋಗದ ಚುನಾವಣಾ ಪ್ರಕ್ರಿಯೆ ಬಗ್ಗೆ ಕ್ಯಾತೆ ತೆಗೆಯುತ್ತಿದ್ದಾರೆ. ಇವರಿಗೆ ಕರ್ನಾಟಕ ಈಗ ನೆನಪಾಯಿತೇ,'' ಎಂದು ವಿಧಾನ ಸಭೆ ಪ್ರತಿಪಕ್ಷದ ನಾಯಕ ಆರ್. ಅಶೋಕ್ ಪ್ರಶ್ನಿಸಿದ್ದಾರೆ. 24 ತಿಂಗಳಲ್ಲಿ 2,000ಕ್ಕೂ ಹೆಚ್ಚು ರೈತರ ಆತ್ಮಹತ್ಯೆ, ಸರಕಾರಿ ಆಸ್ಪತ್ರೆಗಳಲ್ಲಿ ಕಳಪೆ ಔಷಧದಿಂದ 500ಕ್ಕೂ ಹೆಚ್ಚು ಗರ್ಭಿಣಿ, ಬಾಣಂತಿಯರು, ಶಿಶುಗಳು ಮೃತಪಟ್ಟಾಗ, ಮೈಕ್ರೊ ಫೈನಾನ್ಸ್ ಕಂಪನಿಗಳ ಹಾವಳಿಯಿಂದ 50ಕ್ಕೂ ಹೆಚ್ಚು ಬಡವರು ಆತ್ಮಹತ್ಯೆ ಮಾಡಿಕೊಂಡಾಗ ಬರಲಿಲ್ಲ, ಕಾಲ್ತುಳಿತ ಸಂಭವಿಸಿ 11 ಅಮಾಯಕರು ಮೃತಪಟ್ಟಾಗಲೂ ಬರಲಿಲ್ಲ, ಈಗ ಬಿಹಾರ ವಿಧಾನಸಭೆ ಚುನಾವಣಾ ಸೋಲಿಗೆ ಕುಂಟು ನೆಪ ಸೃಷ್ಟಿಸಿಕೊಳ್ಳಲು ಯಾವ ಮುಖ ಇಟ್ಟುಕೊಂಡು ಕರ್ನಾಟಕಕ್ಕೆ ಬರುತ್ತಿದ್ದಾರೆ,'' ಎಂದು ಪ್ರಶ್ನೆ ಮಾಡಿದರು.

ಪ್ರಭಾ ವಿರುದ್ಧದ ಅರ್ಜಿ ವಜಾ

ಬೆಂಗಳೂರು: ಮತದಾರರಿಗೆ ಗ್ಯಾರಂಟಿ ಕಾರ್ಡ್‌ಗಳನ್ನು ಹಂಚುವ ಮೂಲಕ ಚುನಾವಣಾ ಅಕ್ರಮವೆಸಗಿದ ಆರೋಪದ ಮೇರೆಗೆ ದಾವಣಗೆರೆಯ ಕಾಂಗ್ರೆಸ್ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ವಿರುದ್ಧ ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿಯನ್ನು ಹೈಕೋರ್ಟ್ ಬುಧವಾರ ತಿರಸ್ಕರಿಸಿದೆ.

ಡಾ. ಪ್ರಭಾ ಮಲ್ಲಿಕಾರ್ಜುನ್ ಆಯ್ಕೆ ಅಸಿಂಧುಗೊಳಿಸಬೇಕೆಂದು ಕೋರಿ ಬಿಜೆಪಿ ಪರಾಜಿತ ಅಭ್ಯರ್ಥಿ ಜಿ.ಎಸ್.ಗಾಯತ್ರಿ ಸಿದ್ದೇಶ್ವರ್ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾ. ಎಂ.ಐ.ಅರುಣ್ ಅವರಿದ್ದ ಏಕಸದಸ್ಯ ಪೀಠ, ಅರ್ಜಿಯನ್ನು ತಿರಸ್ಕರಿಸಿದೆ.

''ಗ್ಯಾರಂಟಿ ಯೋಜನೆಗಳು ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯ ಭಾಗವಾಗಿದ್ದು, ಅದು ಪ್ರತ್ಯೇಕವಾಗಿ ಅಭ್ಯರ್ಥಿಗೆ ಸಂಬಂಧಿಸಿರುವುದಿಲ್ಲ, ಪ್ರಣಾಳಿಕೆಯಲ್ಲಿ ನೀಡಿರುವ ಭರವಸೆ ಅಥವಾ ಘೋಷಣೆಗಳನ್ನು ಪ್ರಜಾಪ್ರತಿನಿಧಿ ಕಾಯಿದೆ-1951 'ಎ' ಸೆಕ್ಷನ್ 123 (1) ಎ)(ಬಿ) ಅಡಿ ಚುನಾವಣಾ ಅಕ್ರಮಗಳೆಂದು ಹೇಳಲಾಗದು,'' ಎಂದು ಸಚಿವ ಜಮೀರ್ ಅಹ್ಮದ್ ವಿರುದ್ಧ ಸಲ್ಲಿಸಲಾಗಿದ್ದ ಇಂತಹದ್ದೇ ಅರ್ಜಿಯಲ್ಲಿ ನೀಡಲಾಗಿರುವ ತೀರ್ಪನ್ನು ನ್ಯಾಯಾಲಯ ಉಲ್ಲೇಖಿಸಿದೆ.

ಒಟ್ಟಾಗಿರಲು ಬೆಳಗಾವಿ ಸಚಿವರಿಬ್ಬರಿಗೆ ಬುದ್ಧಿವಾದ

ವೈಯಕ್ತಿಕ ಪ್ರತಿಷ್ಠೆ ಸರಕಾರ, ಪಕ್ಷಕ್ಕೂ ಮುಜುಗರ | 10 ಜಿಲ್ಲೆಗಳ ಶಾಸಕರೊಂದಿಗೆ ದಿನವಿಡೀ ಸಮಸ್ಯೆ ಆಲಿಸಿದ ಸಿಎಂ

■ **ವಿಕ ಸುದ್ದಿಲೋಕ** ಬೆಂಗಳೂರು

ಪಕ್ಷದ ಶಾಸಕರ ಮನವಿ ಮತ್ತು ಬೇಡಿಕೆಗಳನ್ನು ಆಲಿಸಿ ಉಸ್ತುವಾರಿ ಸಚಿವರ ಜತೆಗಿನ ಸಮನ್ವಯ ಬೆಸೆದು ವಿಶ್ವಾಸ ವೃದ್ಧಿ ಪ್ರಯತ್ನವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2ನೇ ದಿನವಾದ ಬುಧವಾರ 10 ಜಿಲ್ಲೆಗಳ ಸಭೆ ನಡೆಸಿದರು. ಕ್ಷೇತ್ರವಾರು ಬಿಡುಗಡೆಯಾಗಿರುವ ಅನುದಾನ, ಚುನಾವಣೆ ವೇಳೆ ಕ್ಷೇತ್ರದಲ್ಲಿ ಕೊಟ್ಟಿರುವ ಆಶ್ವಾಸನೆಗಳು ಹಾಗೂ ಬಜೆಟ್ ಕಾರ್ಯಕ್ರಮಗಳ ಅನುಷ್ಠಾನ ಸ್ಥಿತಿಗತಿ ಕುರಿತು ಶಾಸಕ ಸಹೋದ್ಯೋಗಿಗಳೊಂದಿಗೆ ಸಿಎಂ ಸಮಾಲೋಚನೆ ನಡೆಸಿದರು.

ವಿಧಾನಸೌಧದ ಸಿಎಂ ಕಚೇರಿಯಲ್ಲಿ ನಡೆದ ಜಿಲ್ಲಾವಾರು ಶಾಸಕರ ಸಭೆಗಳು ಸಂಬಂಧಿತ ಉಸ್ತುವಾರಿ ಸಚಿವರ ಸಮ್ಮುಖದಲ್ಲೇ ನಡೆದವು.

ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ವಿಜಯನಗರ, ಬಳ್ಳಾರಿ, ಬೆಳಗಾವಿ, ಹುಬ್ಬಳ್ಳಿ -ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಶಾಸಕರ ಸಭೆ ನಡೆಯಿತು. ಶಾಸಕರ ಸಮಸ್ಯೆ ಆಲಿಸುವ ಜತೆಗೆ ಪರಿಣಾಮಕಾರಿಯಾಗಿ ಕೆಲಸ ಮಾಡುವ ಕುರಿತಂತೆ ಸಿಎಂ ಕಿವಿಮಾತು ಹೇಳಿದರು.

ಉಸ್ತುವಾರಿ ಸಚಿವರ ಜತೆಗಿನ ಕೆಲವು ಶಾಸಕರ ಅಸಮಾಧಾನವನ್ನು ತಣಿಸುವ ಪ್ರಯತ್ನ ನಡೆಸಿದರು. ಮಂಜೂರು ಮಾಡಿರುವ ತಲಾ 50 ಕೋಟಿ ರೂ.

ಬೆಳಗಾವಿ ಜಿಲ್ಲೆಯ ಶಾಸಕರು ಮತ್ತು ಸಚಿವರ ಜತೆ ಸಭೆ ನಡೆಸಿದ ಸಿಎಂ ಸಿದ್ದರಾಮಯ್ಯ.

ವಿಶೇಷ ಅನುದಾನವನ್ನು ಪೂರ್ಣವಾಗಿ ಬಳಕೆ ಮಾಡಿಕೊಳ್ಳುವಂತೆ ಶಾಸಕರಿಗೆ ಮುಖ್ಯಮಂತ್ರಿಗಳು ಸಲಹೆ ನೀಡಿದರು.

ಗೈರಾದ ಬಿ.ಆರ್.ಪಾಟೀಲ್: ಕಲಬುರಗಿ ಜಿಲ್ಲೆಯ ಸಭೆಗೆ ಆಳಂದ ಕ್ಷೇತ್ರದ ಬಿ.ಆರ್. ಪಾಟೀಲ್ ಗೈರಾದರು. ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರೊಂದಿಗೆ ಜಿಲ್ಲೆಯ ಉಳಿದ 6 ಶಾಸಕರು ಪಾಲ್ಗೊಂಡರು. ಈ ಹಿಂದೆ ಸುರ್ಜೇವಾಲಾ ಭೇಟಿ ವೇಳೆಯೂ ಸಚಿವರ ವಿರುದ್ಧ ಅಸಮಾಧಾನ ಹೊರಹಾಕಿದ್ದ ಅವರು, ಸಿಎಂ ಸಭೆಗೂ ಬಾರದೆ ಅತೃಪ್ತಿ ತೋರ್ಪಡಿಸಿರುವುದು ಗಮನ ಸೆಳೆದಿದೆ.

ಸಿಎಂ ಬುದ್ಧಿವಾದ: ಡಿಸಿಸಿ ಬ್ಯಾಂಕ್ ಚುನಾವಣೆ ಸೇರಿದಂತೆ ಯಾವುದೇ ವಿಚಾರದಲ್ಲಿ ಗೊಂದಲ ಮಾಡಿಕೊಳ್ಳದೆ ಒಟ್ಟಾಗಿ ಹೋಗುವಂತೆ ಸಚಿವರಾದ ಸತೀಶ್ ಜಾರಕಿಹೊಳಿ ಹಾಗೂ ಲಕ್ಷ್ಮೀ ಹೆಬ್ಬಾಳಕರ್ ಅವರಿಗೆ ಸಿಎಂ ಸಿದ್ದರಾಮಯ್ಯ ಬುದ್ಧಿವಾದ ಹೇಳಿದ್ದಾರೆ. ''ವೈಯಕ್ತಿಕ ಕಾರಣಕ್ಕೆ ಅಸಮಾಧಾನ ಅಥವಾ ಗೊಂದಲ ಸೃಷ್ಟಿಯಾಗದಂತೆ ನೋಡಿಕೊಳ್ಳಿ. ಇಲ್ಲವಾದರೆ ಪಕ್ಷ ಮತ್ತು ಸರಕಾರ ಎರಡಕ್ಕೂ ಮುಜುಗರ ಎದುರಾಗುತ್ತದೆ. ಈ ಬಗ್ಗೆ ಎಚ್ಚರಿಕೆ ವಹಿಸಿ,'' ಎಂದು ಇಬ್ಬರೂ ಸಚಿವರಿಗೆ ಸಿಎಂ ಕಿವಿಮಾತು ಹೇಳಿದರು ಎನ್ನಲಾಗಿದೆ.

ಡಿಸಿಎಂ ಜತೆಗೂ ಮಾತನಾಡುವೆ: ಬೆಳಗಾವಿ ದೊಡ್ಡ ಜಿಲ್ಲೆಯಾಗಿದ್ದು, ಜಲ ಸಂಪನ್ಮೂಲ ಇಲಾಖೆಯಿಂದ ಹೆಚ್ಚಿನ ಅನುದಾನ ಬರುತ್ತಿಲ್ಲ ಎಂದು ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ನಮ್ಮ ಜಿಲ್ಲೆ ಮಾತ್ರವಲ್ಲ, ಉತ್ತರ ಕರ್ನಾಟಕ ಭಾಗದ ಬಹುತೇಕ ನೀರಾವರಿ ಯೋಜನೆಗಳು ನಿರೀಕ್ಷಿತ ಪ್ರಗತಿ ಸಾಧಿಸಿಲ್ಲ ಎಂದು ಅವರು ಪಕ್ಷದ ಶಾಸಕರ ಸಮ್ಮುಖದಲ್ಲಿ ಸಿಎಂ ಎದುರು ಅತೃಪ್ತಿ ಹೊರಹಾಕಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿದ ಸಿಎಂ, ''ನೀರಾವರಿ ಯೋಜನೆಗಳಿಗೆ ಹೆಚ್ಚುವರಿ ಅನುದಾನ ಕೊಡುವ ಪ್ರಯತ್ನ ಮಾಡುತ್ತೇನೆ. ಡಿಸಿಎಂ ಜತೆಗೂ ಈ ವಿಚಾರದಲ್ಲಿ ಮಾತನಾಡುತ್ತೇನೆ. ಜಿಲ್ಲೆಯ ಆಂತರಿಕ ವಿಚಾರದಲ್ಲಿ ಪಕ್ಷದಲ್ಲಿ ಒಗ್ಗಟ್ಟು ಕಾಯ್ದುಕೊಂಡು ಹೋಗುವುದು ಮುಖ್ಯ,'' ಎಂದು ಸೂಚಿಸಿದರು ಎನ್ನಲಾಗಿದೆ.

ಕಾಗೆ ಸಮಸ್ಯೆಯೇ ಬೇರೆ!: ಬೆಳಗಾವಿ ಜಿಲ್ಲಾ ಶಾಸಕರ ಸಭೆ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ, ''ಸುರ್ಜೇವಾಲಾ ಎದುರು ರಾಜು ಕಾಗೆ ಸಮಸ್ಯೆ ತೋಡಿಕೊಂಡಿದ್ದರು. ಕಾಗೆ ಅವರದ್ದು ನೀರಾವರಿ ಇಲಾಖೆಗೆ ಸಂಬಂಧಿಸಿದ ಸಮಸ್ಯೆ. ಕ್ಷೇತ್ರಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಅವರು ಸಿಎಂ ಬಳಿ ಹೇಳಿಕೊಂಡಿದ್ದು, ಸಿಎಂ ಸ್ಪಂದನೆ ಸಿಕ್ಕಿದೆ. ರಾಜು ಕಾಗೆ ಕ್ಷೇತ್ರಕ್ಕೆ ಸಿಎಂ ಕೋಟಾದಲ್ಲಿ 50 ಕೋಟಿ ರೂ. ಸಿಕ್ಕಿದ್ದು, ನಮ್ಮ ಇಲಾಖೆಯಿಂದಲೂ ಅನುದಾನ ಕೊಡುತ್ತಿದ್ದೇವೆ,'' ಎಂದು ಹೇಳಿದರು.

ಜಮೀರ್ -ನಾಗೇಂದ್ರ ದೋಸ್ತಿ

ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಸಭೆ ಬಳಿಕ ಸಚಿವ ಜಮೀರ್ ಅಹ್ಮದ್ ಹಾಗೂ ಮಾಜಿ ಸಚಿವ ಬಿ.ನಾಗೇಂದ್ರ ಪರಸ್ಪರ ಕೈಹಿಡಿದುಕೊಂಡು ಕ್ಯಾಮೆರಾಗಳಿಗೆ ಪೋಸ್ ನೀಡಿದರು. ನಮ್ಮ ಜಿಲ್ಲೆಗಳಲ್ಲಿ ಯಾವ ಸಮಸ್ಯೆ ಇಲ್ಲ, ಎಲ್ಲರೂ ಒಟ್ಟಾಗಿದ್ದೇವೆ ಎಂದು ಹೇಳಿಕೊಂಡರು.

ಕೆಕೆಆರ್‌ಡಿಬಿ ಹೊರತಾಗಿ ನೀರಾವರಿ ಮತ್ತಿತರ ಅಭಿವೃದ್ಧಿ ಕೆಲಸಗಳಿಗೆ ಕಲ್ಯಾಣ ಕರ್ನಾಟಕ ಭಾಗಕ್ಕೆ ಹೆಚ್ಚು ಅನುದಾನಕ್ಕೆ ಮನವಿ ಮಾಡಲಾಗಿದೆ.

- ಅಜಯ್ ಸಿಂಗ್ ಜೇವರ್ಗಿ ಶಾಸಕ

ಅನುಭವ ಮಂಟಪದ ಕಾಮಗಾರಿ ವರ್ಷದೊಳಗೆ ಮುಗಿಯಬೇಕು. ಶಿಕ್ಷಣ, ನೀರಾವರಿ, ಆರೋಗ್ಯಕ್ಕೆ ಹೆಚ್ಚಿನ ಅನುದಾನ ಕೊಡಬೇಕು. ಬೀದರ್ ಪಾಲಿಕೆಗೆ ವಿಶೇಷ ಅನುದಾನಕ್ಕೆ ಮನವಿ ಮಾಡಲಾಗಿದೆ.

- ಈಶ್ವರ ಖಂಡ್ರೆ, ಅರಣ್ಯ ಸಚಿವ

ಸಿಎಂ ವಿಚಲಿತರಾಗಿ ಶಾಸಕರ ಸಭೆ: ಬಿವೈವಿ

■ **ವಿಕ ಸುದ್ದಿಲೋಕ** ಬೆಂಗಳೂರು

ಸಿಎಂ, ಡಿಸಿಎಂ ನಡುವೆ ವ್ಯತ್ಯಾಸ ಕಾಣುತ್ತಿದೆ. ಸಿಎಂ ವಿಚಲಿತರಾಗಿ ಮತ್ತೆ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ವ್ಯಂಗ್ಯವಾಡಿದ್ದಾರೆ.

ಮೈಸೂರಿನ ಸಾಧನಾ ಸಮಾವೇಶದಲ್ಲಿ ಡಿ.ಕೆ.ಶಿವಕುಮಾರ್ ಏಕಾಂಗಿಯಾಗಿ ವೇದಿಕೆಯಿಂದ ಹೊರನಡೆದಿದ್ದರು. ರಾತ್ರೋರಾತ್ರಿ ದಿಲ್ಲಿಗೆ ಹೋದರು. ಹೀಗಾಗಿ ಡಿಕೆಶಿಯನ್ನು ಬಿಟ್ಟು ಸಭೆ ನಡೆಸುತ್ತಿದ್ದಾರೆ,''ಎಂದು ಟೀಕಿಸಿದರು.

ದೀಪಾವಳಿ ಧಮಾಕಾ: ''50 ಕೋಟಿ ರೂ. ಬಿಡುಗಡೆ ಮಾಡಿರುವುದಾಗಿ ಸಿಎಂ ಹೇಳಿ ವಾರ ಕಳೆದರೂ ಆಡಳಿತ ಪಕ್ಷದ ಶಾಸಕರಿಗೆ ಈವರೆಗೆ ಅನುದಾನ ಬಿಡುಗಡೆಯಾಗಿಲ್ಲ, ಪ್ರತಿಪಕ್ಷದ ಶಾಸಕರಿಗೆ 25 ಕೋಟಿ ರೂ. ಅನುದಾನ ನೀಡಲಿದ್ದಾರೆ ಎಂಬ ಊಹಾಪೋಹವಿದ್ದು, ಅದನ್ನೂ ಕೊಟ್ಟಿಲ್ಲ, ದೀಪಾವಳಿ ಧಮಾಕಾ ಕರ್ನಾಟಕದಲ್ಲಿ ಆಗುವುದು ಸತ್ಯ. ರಷ್ಯಾ- ಉಕ್ರೇನ್ ಯುದ್ಧ ನಿಲ್ಲಬಹುದು. ಆದರೆ, ರಾಜ್ಯದಲ್ಲಂತೂ ಯುದ್ಧ ಪ್ರಾರಂಭ ವಾಗಲಿದೆ,'' ಎಂದು ಭವಿಷ್ಯ ನುಡಿದರು.

ನಕಲಿ ದಾಖಲೆ ಸೃಷ್ಟಿಸಿ ಕೋಟ್ಯಂತರ ರೂ. ಮೌಲ್ಯದ ಜಮೀನು ಮಾರಾಟ

ಮೃತಪಟ್ಟಿರುವ ತಂದೆ ಬದುಕಿದ್ದಾರೆಂದು ಮತ್ತೊಬ್ಬರನ್ನು ಕರೆತಂದ ಆರೋಪಿ | ಜಮೀನಿನ ಮೂಲ ಮಾಲೀಕರಿಂದ ದೂರು

■ **ವಿಕ ಸುದ್ದಿಲೋಕ** ಮೈಸೂರು

ಮೃತಪಟ್ಟಿರುವ ತಂದೆಯನ್ನು ಬದುಕಿದ್ದಾರೆ ಎಂದು ನಕಲಿ ದಾಖಲೆ ಸೃಷ್ಟಿಸಿ, ಕೋಟ್ಯಂತರ ರೂ. ಮೌಲ್ಯದ ಜಮೀನು ಮಾರಾಟ ಮಾಡಿದ್ದಾನೆ ಎನ್ನಲಾದ ವ್ಯಕ್ತಿ ಸೇರಿದಂತೆ ಹಲವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಮೈಸೂರು ತಾಲೂಕಿನ ಮಂಡಕಳ್ಳಿ ನಿವಾಸಿಗಳಾದ ವಿವೇಕ್ ಹಟ್ಟಿ, ಸುಮಾ, ಅನಿತಾ, ಪುಷ್ಪಾ ಸೇರಿದಂತೆ ಇತರರ ವಿರುದ್ಧ ಪಾಂಡವಪುರದ ನಿವಾಸಿ ಎಂ.ವಿ. ಕಿಶೋರ್ ದೂರು ನೀಡಿದ್ದು, ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

''ಮೈಸೂರು ತಾಲೂಕಿನ ಮಂಡಕಳ್ಳಿಯಲ್ಲಿ ನನ್ನ ತಾತ ಪತ್ರಪ್ಪ ಅವರಿಗೆ ಸೇರಿದ 4.19 ಎಕರೆ ಜಮೀನನ್ನು ದೊಡ್ಡಪ್ಪ ಪ್ರಭುದೇವ್ ನಮ್ಮ ಗಮನಕ್ಕೆ ತಾರದೆ ತಮ್ಮ ಹೆಸರಿಗೆ ಮಾಡಿಕೊಂಡಿದ್ದರು. ಅಲ್ಲದೇ ಅದನ್ನು ನೀಲ್‌ಕಂಠ್ ನರಸಿಂಹನ್ ಶರ್ಮನ್ ಎಂಬುವವರಿಗೆ ಮಾರಾಟ ಮಾಡಿದ್ದರು. ಈ ಬಗ್ಗೆ ಕೋರ್ಟ್ ಮೊರೆ ಹೋಗಿದ್ದರಿಂದ ಜಮೀನಿನ ಮಾಲೀಕತ್ವವು ನನಗೆ ಸೇರುವಂತಾಯಿತು. ಜಮೀನು ಪಡೆದಿದ್ದ ನರಸಿಂಹನ್ ಶರ್ಮನ್ ಕೂಡ ಹೈಕೋರ್ಟ್ ಮೊರೆ ಹೋದರು. ನಂತರದಲ್ಲಿ ಅವರು ಅಕಾಲಿಕವಾಗಿ ಮೃತಪಟ್ಟಿದ್ದರಿಂದ ಅವರ ಪುತ್ರ ವಿವೇಕ್ ಹಟ್ಟಿ ಕೋರ್ಟ್‌ನಲ್ಲಿ ಪ್ರಕರಣವನ್ನು ಹಿಂಪಡೆಯುವುದಾಗಿ ಹೇಳಿ ಮುಕ್ತಾಯಗೊಳಿಸಿದ್ದರು. ಮತ್ತೆ 2024ರಲ್ಲಿ ವಿವೇಕ್ ಹಟ್ಟಿ ಅವರು ತಮ್ಮ ತಂದೆ ಸಾವಿಗೀಡಾಗಿರುವ ವಿಚಾರವನ್ನು ಮುಚ್ಚಿಟ್ಟು ಅವರ ಹೆಸರಿನಲ್ಲಿ ತತ್ಕಾಲ್ ಪೋಡಿ ಪಡೆದರು. ಮೃತ ವ್ಯಕ್ತಿ ನರಸಿಂಹನ್ ಶರ್ಮನ್ ಎಂಬುದಾಗಿ ಬೇರೊಬ್ಬ ವ್ಯಕ್ತಿಯನ್ನು ಕರೆ ತಂದು ಆಸ್ತಿಯನ್ನು ಮೂವರು ಉದ್ಯಮಿಗಳಿಗೆ ಮಾರಾಟ ಮಾಡಿ ವಂಚಿಸಿದ್ದಾರೆ'' ಎಂದು ದೂರಿನಲ್ಲಿ ಕಿಶೋರ್ ತಿಳಿಸಿದ್ದಾರೆ.

ನಕಲಿ ದಾಖಲೆ ಸೃಷ್ಟಿಸಿ ಮೃತಪಟ್ಟಿರುವ ವ್ಯಕ್ತಿಯ ಹೆಸರಿನಲ್ಲಿರುವ ಜಮೀನು ಮಾರಾಟ ಮಾಡಿರುವ ಸಂಬಂಧ ಪ್ರಕರಣ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ.

-ವಿಷ್ಣುವರ್ಧನ್, ಎಸ್ಪಿ.

ಬಾಲಕಿ ಕೊಂದವನಿಗೆ ಜೀವಾವಧಿ ಶಿಕ್ಷೆ

ಚಾಮರಾಜನಗರ: ಬಾಲಕಿಯನ್ನು ಮದುವೆಯಾಗಲು ಅಪಹರಿಸಿ ಕೊಲೆ ಮಾಡಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಜೀವಾವಧಿ ಶಿಕ್ಷೆ ಹಾಗೂ 30 ಸಾವಿರ ರೂ. ದಂಡ ವಿಧಿಸಿ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾ. ಎಸ್.ಜೆ.ಕೃಷ್ಣ ಬುಧವಾರ ಆದೇಶ ಹೊರಡಿಸಿದ್ದಾರೆ. ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲೂಕಿನ ವಡ್ಡರದೊಡ್ಡಿ ಸಮೀಪದ ಗೋಡೆಸ್‌ನಗರದ ತಂಗರಾಜು ಅಲಿಯಾಸ್ ಆರೋಗ್ಯ ಸ್ವಾಮಿ(35) ಶಿಕ್ಷೆಗೊಳಗಾದವ. ಈತ ಅಪ್ರಾಪ್ತಳನ್ನು ಮದುವೆಯಾಗಲು ಅಪಹರಿಸಿ ಕೊಲೆ ಮಾಡಿರುವುದು ತನಿಖೆಯಲ್ಲಿ ಸಾಬೀತಾಗಿದೆ. ನೊಂದ ಬಾಲಕಿ ಕುಟುಂಬದವರಿಗೆ ಆರೋಪಿ ಕಟ್ಟುವ ದಂಡದ ಹಣದಲ್ಲಿ 25 ಸಾವಿರ ರೂ.ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ 5 ಲಕ್ಷ ರೂ.ಗಳನ್ನು ನೀಡಬೇಕು ಎಂದು ನ್ಯಾ.ಕೃಷ್ಣ ಆದೇಶದಲ್ಲಿ ತಿಳಿಸಿದ್ದಾರೆ. ಸರಕಾರದ ಪರವಾಗಿ ವಿಶೇಷ ಸರಕಾರಿ ಅಭಿಯೋಜಕ ಕೆ.ಯೋಗೇಶ್ ವಾದ ಮಂಡಿಸಿದ್ದಾರೆ.

Published for the proprietors, Metropolitan Media Company Limited by R. J. Prakashan at No. 1 (Old No. 1130/4), Prince of Wales Road, Behind RTO, Chamarajapuram, Mysuru - 570 005 (Ph: 0821 - 2421904, Fax: 0821 - 2421903) and printed by him at Metropolitan Media Company Limited, Plot No.34/B, Hootagalli Industrial Area, Belavadi post, Mysuru - 570 018 RNI No. KARKAN/2000/3492 (Ph: 0821-2410585). Regd.Office: No. 74/2, 4th & 5th floor, Sanjana plaza, Elephant rock road, Jayanagar 3rd block, Bengaluru-560011 (Ph:080-40877666). Editor: Sudarshan Channangihali – responsible for selection of news under PRB Act. Resident Editor: Ramesh I Uthappa.

Finolex Cables Limited

Regd. Office : 26-27, Mumbai - Pune Road, Pimpri, Pune - 411 018
Phone No.: 020 27506200 / 27506202 (D) I **Email:** investors@finolex.com
Website: www.finolex.com I **CIN:** L31300MH1967PLC016531

SPECIAL WINDOW FOR RE-LODGEMENT OF TRANSFER REQUESTS OF PHYSICAL SHARES

Pursuant to SEBI Circular No. SEBI/HO/MIRSD/MIRSD-PoD/P/CIR/2025/97 dated July 02, 2025, the Company is pleased to offer one time special window to physical shareholders to submit re-lodgement requests for transfer of shares. The Special Window has been opened from July 07, 2025 to January 06, 2026 and is applicable to cases where original share transfer requests were lodged prior to April 01, 2019 and were returned/unattended or rejected due to deficiencies in documents, process or any other reason. The requests re-lodged for transfer of equity shares will be processed only in dematerialized form and subject to successful verification of documents. The eligible shareholders may submit their transfer requests along with the requisite documents to the Company's Registrar and Transfer Agent (RTA) at KFin Technologies Limited, Tower - B, Plot No 31 and 32, Selenium Building, Financial District, Nanakramguda, Gachibowli, Hyderabad-500032

UPDATE KYC AND CONVERT PHYSICAL SHARES INTO DEMAT MODE

The shareholders who are holding shares in physical form are requested to update their KYC (viz. PAN, Contact details and Bank Account details) and also requested to convert their physical share Certificates into dematerialized form (i.e. electronic form). The Shareholders are also requested to claim their unclaimed dividend, if any, otherwise the same will be transferred to Investor Education and Protection Fund Authority (IEPFA) upon completion of 7 (seven) consecutive years along with Equity Shares thereon, in accordance with the IEPF Rules.

For **FINOLEX CABLES LIMITED**
Sd/-
Siddhesh Mandke
Company Secretary

Place : Pune
Dated : 31/07/2025

DCM SHRIRAM LIMITED

CIN No.: L74899DL1989PLC034923
Regd. Office: 2nd Floor (West Wing), Worldmark 1, Aerocity, New Delhi-110037
Tel.: 011-42100200
E-mail: shares@dcmshriram.com
Website: www.dcmshriram.com

SPECIAL WINDOW FOR RE-LODGEMENT OF TRANSFER REQUEST OF PHYSICAL SHARES

Pursuant to SEBI Circular No. SEBI/HO/MIRSD/MIRSD-PoD/P/CIR/2025/97 dated 2nd July 2025, all shareholders are hereby informed that a special Window is being opened for a period of six months, from 7th July 2025 to 6th January 2026 to facilitate re-lodgement of transfer requests of physical shares.

This facility is available only for Transfer Deeds lodged prior to 1st April 2019 and which were rejected, returned, or not attended to, due to deficiencies in documents/process/or otherwise.

The aforesaid Investors who have missed the earlier deadline of 31st March 2021, are encouraged to take advantage of this opportunity, by furnishing the necessary documents to the Company's RTA i.e. MCS Share Transfer Agent Ltd., 179-180, DSIDC Shed, 3rd Floor, Okhla Industrial Area, Phase-1, New Delhi -110020, Email- helpdeskdelhi@mcsregistrars.com

By Order of Board of Directors
For DCM Shriram Limited
Sd/-
Deepak Gupta
Company Secretary

Date: 31st July 2025
Place: New Delhi

LMW LIMITED

(Formerly Lakshmi Machine Works Limited)
Regd Office: SRK Vidyalaya Post, Perianaickenpalayam, Coimbatore -641020, Email Id: secretarial@lmw.co.in, Ph: 0422-7192255
CIN-L29269TZ1962PLC000463

NOTICE OF LOSS OF SHARE CERTIFICATES

Notice is being given that the following share certificate(s) of the Company 1 share certificate consisting of 5 shares of Rs.100/- each is lost/misplaced and is not traceable.

Folio No	Name	Certificate No(s).	Distinctive Nos. From	Distinctive Nos. To	No. of Shares
BIMA/8	BIMAL KUMAR KEDIA	57553	522661	522665	5

The above shares have been transferred to Investor Education & Protection Fund Authority as per IEPF rule. The Shareholder has made a claim with IEPF authority for claiming the above shares and unclaimed dividends on these shares. Any person who has any claim's in respect of the said shares should lodge such claim with the Company at its registered office within 15 days of publication of this notice, after which no claim will be entertained.

For LMW LIMITED
C R SHIVKUMARAN
Company Secretary

Coimbatore
30.07.2025

ASHIANA HOUSING LTD.

CIN: L70109WB1986PLC040864
Regd. Off. : 5F, Everest, 46/C, Chowringhee Road, Kolkata – 700 071
Head Off. : Unit No. 4 & 5, IIIrd Floor, Southern Park, Plot No. D-2 Saket District Centre, New Delhi -110 017
Website: www.ashianahousing.com
Email: investorrelations@ashianahousing.com

PUBLIC NOTICE

This is to inform to all concerned that the company has received request along with necessary indemnity bond and affidavit from shareholder(s) of the company to issue duplicate share certificate in lieu of the lost share certificate, details of which is given herein below:

Sl. No.	Name of Regd. Shareholder	L.F. No.	Share Certificate No.	Distinctive No.	No. of Shares
1.	Mahesh Kumar Gupta	0010001	1981	3691251-3693000	1750

Since the company is in the process of issuing duplicate share certificate, any person who has objection on such issue, may lodge his objection within 15 days from the date of appearance of this advertisement to the company or its Registrar M/s. Beetal Financial & Computer Services Pvt. Ltd., Beetal House, 99, Madangir, Behind Local Shopping Centre, Near Dada Harsukh Dass Mandir, New Delhi-110 062.

For **Ashiana Housing Ltd.**
Sd/-
Nitin Sharma
(Company Secretary)

Place : New Delhi
Date : 30th July 2025

S.J.S. ENTERPRISES LIMITED

Registered and Corporate Office: Sy No 28/P16 of Agra Village and Sy No 85/P6 of B.M Kaval Village, Kengeri Hobli, Bangalore 560 082, Karnataka, India
Website: www.sjsindia.com | **E-mail:** compliance@sjsindia.com | **Tel:** +91 80 6194 0777
CIN: L51909KA2005PLC036601

EXTRACT OF STATEMENT OF UNAUDITED CONSOLIDATED FINANCIAL RESULTS FOR THE QUARTER ENDED 30TH JUNE, 2025

(Rupees in million, except per equity share data)

Sl. No.	Particulars	Quarter ended 30 June 2025	31 March 2025	30 June 2024	Year ended 31 March 2025
		Unaudited	(Audited)	Unaudited	Audited
1	Total income from operations	2,096.58	2,005.12	1,886.24	7,604.86
2	Net Profit for the period (before tax and exceptional items)	459.37	405.99	376.54	1,528.64
3	Net Profit for the period before tax (after exceptional items)	459.37	405.99	376.54	1,528.64
4	Net Profit for the period after tax and after exceptional items	346.16	337.34	282.40	1,188.32
5	Total Comprehensive Income for the period [Comprising Profit for the period (after tax) and Other Comprehensive Income (after tax)]	337.20	339.67	276.66	1,178.83
6	Equity Share Capital	313.33	313.26	310.38	313.26
7	Other Equity	-	-	-	6,458.54
8	Earnings Per Share (of Rs. 10/- each)	Not annualised	Not annualised	Not annualised	Annualised
	1. Basic (Not annualised)	11.03	10.67	8.97	37.82
	2. Diluted (Not annualised)	10.74	10.40	8.76	36.88

Notes

1. Key Standalone Financial Information of the company is given below:

(Rupees in million)

Sl. No.	Particulars	Quarter ended 30 June 2025	31 March 2025	30 June 2024	Year ended 31 March 2025
		Unaudited	(Audited)	Unaudited	Audited
1	Total Revenue from Operations	1,237.22	1,028.26	967.62	3,980.05
2	Profit before tax	365.25	261.30	250.87	1128.59
3	Profit after tax	273.13	245.56	187.42	919.93
4	Total Comprehensive Income	266.19	249.06	184.13	914.53

2. The above Consolidated and Standalone unaudited financial results for the quarter ended 30 June 2025 has been reviewed by the Audit Committee and thereafter approved by the Board of Directors at their respective meeting held on 29 July 2025.
3. The above is an extract of the unaudited quarterly financial results filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015 as amended. The detailed unaudited quarterly financial results are available on the website of BSE Limited at www.bseindia.com and National Stock Exchange of India Limited at www.nseindia.com and also on the Company's website at www.sjsindia.com.

For and on behalf of the Board of Directors
of S.J.S. Enterprises Limited
Sd/-
K A Joseph
Managing Director
DIN: 00784084

Place: Bangalore
Date: 29 July 2025

HSBC MUTUAL FUND

NOTICE

NOTICE is hereby given to all the Investor(s)/ Unit holder(s) of HSBC Mutual Fund ("the Fund") that in accordance with Regulation 54 and 56 of Securities and Exchange Board of India (Mutual Funds) Regulations, 1996 read with para 5.4.5 of SEBI Master Circular dated June 27, 2024, the Annual Report and the Abridged Annual Report of all schemes of the Fund for the year ended March 31, 2025, have been hosted on the Fund's website at www.assetmanagement.hsbc.com/in and on AMFI's website at www.amfiindia.com.

Investors/ Unit holders can also submit a request for a physical or electronic copy of the scheme wise annual report or abridged summary thereof through following modes:

Email: investor.line@mutualfunds.hsbc.co.in
Call: Toll free number(s) - 1800-4190-200/ 1800-200-2434 or +91 44 39923900 (Investors calling from abroad) between Monday to Friday (8:00 AM to 8:00 PM) and Saturday (8:00 AM to 1:00 PM)

Additionally, Unit holders may also contact Investor Service Centres.

Further, Unit holders are encouraged to register their email id with us for receiving periodic updates on emails.

For & on behalf of HSBC Asset Management (India) Private Limited
(Investment Manager to HSBC Mutual Fund)

Sd/-
Authorised Signatory
Mumbai, July 30, 2025

HSBC Asset Management

Mutual Fund investments are subject to market risks, read all scheme related documents carefully.

HSBC Asset Management (India) Private Limited, 9-11 Floors, NESCO IT Park, Building no. 3, Western Express Highway, Goregaon (East), Mumbai – 400 063, India.
Email: investor.line@mutualfunds.hsbc.co.in, Website: www.assetmanagement.hsbc.co.in
Customer Service Number - 1800 200 2434/ 1800 4190 200
Issued by HSBC Asset Management (India) Private Limited
CIN-U74140MH2001PTC134220

IIFL Finance Limited

CIN: L67100MH1995PLC093797
Registered Office: IIFL House, Sun Infotech Park, Road No. 16V, Plot No. B-23, Thane Industrial Area, Wagle Estate, Thane - 400604
Tel: (91-22) 4103 5000 • Fax: (91-22) 2580 6654
E-mail: shareholders@iifl.com • Website: www.iifl.com

Scan the QR code to view complete financial results

EXTRACT OF UNAUDITED CONSOLIDATED FINANCIAL RESULTS FOR THE QUARTER ENDED JUNE 30, 2025

(₹ in Crore)

Particulars	Quarter Ended June 30, 2025 Unaudited	March 31, 2025 Audited	June 30, 2024 Unaudited	Year Ended March 31, 2025 Audited
Total Revenue from Operations	**2,952.83**	**2,591.25**	**2,621.02**	**10,210.90**
Net Profit/ (Loss) for the Period / Year (Before Tax, Exceptional Items)	356.31	309.47	436.16	1,293.51
Net Profit/ (Loss) for the Period / Year Before Tax (After Exceptional Items)	356.31	309.47	436.16	707.01
Net Profit/ (Loss) for the Period / Year After Tax (After Exceptional Items)	274.17	251.36	338.16	578.16
Total Comprehensive Income/ (Loss) for the Period / Year [Comprising Profit/ (Loss) for the Period / Year (After Tax) and Other Comprehensive Income/ (Loss) for the Period/ Year (After Tax)]	264.57	241.71	336.94	564.89
Paid up Equity Share Capital	84.99	84.90	84.84	84.90
Reserves (Excluding Revaluation Reserve) As shown in the Audited Balance Sheet of Previous Year				12,327.06
Securities Premium Account	4,729.89	4,721.93	4,719.35	4,721.93
Net Worth	12,389.81	12,139.54	11,976.78	12,139.54
Paid up Debt Capital / Outstanding Debt	55,027.21	51,068.02	41,919.23	51,068.02
Debt Equity Ratio	3.86	3.66	3.06	3.66
Earnings Per Share (Face value of ₹ 2/- each) (For Continuing and Discontinued Operations)				
- Basic	5.49	4.89	7.24	9.07
- Diluted	5.45	4.85	6.96	8.73
Capital Redemption Reserve	230.11	230.11	230.11	230.11
Debenture Redemption Reserve	12.80	12.80	12.80	12.80
Debt Service Coverage Ratio	N.A.	N.A.	N.A.	N.A.
Interest Service Coverage Ratio	N.A.	N.A.	N.A.	N.A.

Notes: 1. These consolidated financial results have been prepared in accordance with the recognition and measurement principles laid down in Indian Accounting Standard 34 "Interim Financial reporting" ("Ind AS 34") as prescribed under Section 133 of the Companies Act, 2013 read with relevant Rules framed there under and other accounting principles generally accepted in India and in accordance with the requirement of Regulation 33 and 52 of the SEBI (Listing Obligations and Disclosure Requirements) Regulations, 2015, as amended. **2.** The above consolidated financial results for the quarter ended June 30, 2025, have been reviewed by the Audit Committee and approved by the Board at its meeting held on July 30, 2025. The Joint Statutory Auditors of the Company have carried out the Limited Review of the aforesaid results and have issued an unmodified conclusion. **3.** The Key data relating to standalone financial results of IIFL Finance Limited is as under : (₹ in Crore)

Particulars	Quarter Ended June 30, 2025 Unaudited	March 31, 2025 Audited	June 30, 2024 Unaudited	Year Ended March 31, 2025 Audited
Total Revenue from Operations	1,479.17	1,138.33	1,019.43	4,066.17
Profit / (Loss) Before Tax and Exceptional Items	178.35	50.20	(31.12)	35.73
Profit / (Loss) Before Tax and After Exceptional Items	178.35	50.20	(31.12)	(550.77)
Profit / (Loss) After Tax	132.77	38.42	(22.66)	(409.57)
Total Comprehensive Income / (Loss)	128.72	29.66	(19.34)	(412.63)

4. The above is an extract of the detailed format of quarter ended financial results filed with the stock exchanges under Regulation 33 and 52 of the SEBI (Listing Obligations and Disclosure Requirements) Regulations, 2015. The full format of the quarter ended financial results are available on the stock exchange websites viz. www.bseindia.com and www.nseindia.com and on the Company's website viz. www.iifl.com. **5.** For the other line items referred in Regulation 52 (4) of the SEBI (Listing Obligations and Disclosure Requirements) Regulations, 2015, pertinent disclosures have been made to the stock exchanges websites viz. www.bseindia.com and www.nseindia.com and on the Company's website viz. www.iifl.com.

By order of the Board
For **IIFL Finance Limited**
Sd/-
Nirmal Jain
Managing Director
DIN: 00010535

Date : **July 30, 2025**
Place : **Mumbai**

Kaynes Technology India Limited

Regd. Off. 23-25, Belagola Food Industrial Estate, Metagalli P.O., Mysore-570 016, Karnataka. India
website: www.kaynestechnology.co.in email: kaynestechcs@kaynestechnology.net
Corporate Identity Number: L29128KA2008PLC045825. Telephone No: +91 8212582595

EXTRACT OF THE UNAUDITED CONSOLIDATED FINANCIAL RESULTS FOR THE QUARTER ENDED 30TH JUNE 2025

(Rs. in million, except per share data)

Particulars	Quarter ended 30th June 2025	31st March 2025	30th June 2024	Year ended 31st March 2025
	(Unaudited)	(Audited)	(Unaudited)	(Audited)
Revenue from operations	6,734.66	9,844.83	5,039.78	27,217.52
Net profit before exceptional items and tax	960.87	1,419.32	641.16	3,716.24
Net profit before tax	960.87	1,419.32	641.16	3,716.24
Net profit from ordinary activities after tax	746.12	1,162.02	507.77	2,934.33
Total comprehensive income for the period attributable to shareholders [comprising profit for the period (after tax) and other comprehensive income (after tax)]	735.21	1,168.68	505.16	2,944.11
Paid-up equity share capital	669.57	640.84	639.18	640.84
(Face value of Rs.10 each)				
Earnings per share	(not annualised)	(not annualised)	(not annualised)	(annualised)
(a) Basic	11.63	18.12	7.93	45.82
(b) Diluted	11.52	17.99	7.84	45.40

1) Key standalone financial information

Particulars	Quarter ended 30th June 2025	31st March 2025	30th June 2024	Year ended 31st March 2025
	(Unaudited)	(Audited)	(Unaudited)	(Audited)
Revenue from operations	4,508.22	7,365.46	3,501.57	19,154.43
Profit before tax	687.50	776.15	588.81	2,753.48
Profit after tax	542.85	604.09	485.12	2,099.05

2) The statement of unaudited standalone and consolidated financial results ("the Statements") of Kaynes Technology India Limited ('the Company') for the quarter ended 30th June 2025 have been reviewed by the Audit Committee and approved by the Board of Directors of the Company at their meetings held on 30th July 2025. The above Statements have been subjected to Limited Review by the Statutory Auditors of the Company. The reports of the Statutory Auditors are unqualified.

3) The Statements have been prepared in accordance with Indian Accounting Standards ('Ind AS') prescribed under section 133 of The Companies Act, 2013 and in terms of Regulation 33 of the SEBI (Listing Obligations and Disclosure Requirements) Regulations, 2015.

4) The above is an extract of the detailed format of unaudited financial results filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015. The full format of the unaudited financial results are available on the Stock Exchanges' websites, www.nseindia.com and www.bseindia.com and on the Company's website www.kaynestechnology.co.in. and the same can also accessed by scanning the QR code provided.

By Order of the Board
For Kaynes Technology India Limited

Sd/-
Savitha Ramesh
DIN: 01756684
Whole Time Director & Chairperson